ದಿನಾಂಕ : 27-05-2022 ಓ ಎಸ್ ನಂ. 294/2016

ಪಿ. ಡಬ್ಲ್ಯೂ - 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಶ್ರೀ ಎಮ.ವಾಯ.ಎಸ 2 ನೇ ಪ್ರತಿವಾದಿ ಪರ ವಕೀಲರಿಂದಃ</u>

ಪ್ರಸ್ತುತ ದಾವೆಯನ್ನು ಸರ್ವೆ ನಂ. 176 ಕ್ಕೆ ಸಂಬಂಧಿಸಿದಂತೆ ಮಾಡಿರುತ್ತೇನೆ. ಸದರಿ ಸರ್ವೆ ನಂಬರನ ವಿಸ್ತೀರ್ಣವು 10 ಗುಂಟೆ ಆಗಿರುತ್ತದೆ. ಪ್ರಸ್ತುತ ದಾವೆಯನ್ನು ನಾನು 1 ಮತ್ತು 2 ನೇ ಪ್ರತಿವಾದಿಯರ ವಿರುದ್ಧ ಮಾಡಿರುತ್ತೇನೆ. 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ಸರ್ವೆ ನಂ. 178 ರಲ್ಲಿ ಜಾಗವನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ 2 ನೇ ಪ್ರತಿವಾದಿಗೆ ಜಾಗವನ್ನು ನೀಡಿದಾಗಿನಿಂದ ಸದರಿ 2 ನೇ ಪ್ರತಿವಾದಿಯು ಸದರಿ ಜಾಗದಲ್ಲಿ ಆಶ್ರಯ ಮನೆಯನ್ನು ಕಟ್ಟಿಕೊಂಡು 1993 ನೇ ಇಸವಿಯಿಂದ ಇಲ್ಲಿಯವರೆಗೆ ವಾಸ ಮಾಡಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 178 ಇದು 2 ನೇ ಪ್ರತಿವಾದಿಯ ಅತ್ತೆಯಾದ ಅಲ್ಲಾಬಿ ಮುಟುಗಸಾಬ ಹುಣಶೀಕಟ್ಟಿ ಈಕೆಗೆ 3 ನೇ ಪ್ರತಿವಾದಿಯರಿಂದ ಮುಂಜೂರಾಗಿತ್ತು ಎನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. 1994 ನೇ ಇಸವಿಯಲ್ಲಿ 2 ನೇ ಪ್ರತಿವಾದಿಯ ಅತ್ತೆಯ ಮರಣ ನಂತರ ಸದರಿ ಸರ್ವೆ ನಂ.178 ರ ಜಾಗವು 2 ನೇ ಪ್ರತಿವಾದಿಯ ಗಂಡನಾದ ಮುಗುಟಸಾಬ ಹುಣಶೀಕಟ್ಟಿ ಇತನ ಹೆಸರಿಗೆ ಹೋಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 178 ನ್ನು ಚಾಂದಬಿ ಹುಲಿಕೇರಿಯವರಿಗೆ ಬೆಳಗಾವಿ ಜಿಲ್ಲಾಧಿಕಾರಿಯವರು ಮಂಜೂರು ಮಾಡಿದ್ದರು ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಿಲ್ಲಾಧಿಕಾರಿಯವರು ಜಾಂದಬಿ ಹುಲಿಕೇರಿಯವರಿಗೆ ಮಾಡಿದ ಆದೇಶವು ತಪ್ಪಿರುತ್ತದೆ ಎಂದು ಪ್ರಸ್ತುತ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 64/2004 ನ್ನು ಠರಾವಿಕ ಮತ್ತು ನಿರ್ದೇಶನಾತ್ಮಕ ದಾವೆಯನ್ನು ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ ನಂ. 64/2004 ರಲ್ಲಿ 2 ನೇ ಪ್ರತಿವಾದಿಯ ಗಂಡನೇ ಸರ್ವೆ ನಂ. 178 ಕ್ಕೆ ಮಾಲೀಕ ಎಂದು ಆದೇಶವಾಗಿರುತ್ತದೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ ನಂ. 64/2004 ರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದಾಗ ಮೇಲ್ಮನವಿಯಲ್ಲಿಯೂ ಕೂಡ 2 ನೇ ಪ್ರತಿವಾದಿಯ ಗಂಡನೇ ಮಾಲೀಕ ಎಂದು ಆದೇಶವಾಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 178 ರ ಜಾಗವನ್ನು ಕಬ್ಜೆಗೆ ಕೊಡಬೇಕೆಂದು 2 ನೇ ಪ್ರತಿವಾದಿಯು ಇಪಿ ನಂ. 24/2010 ನ್ನು ದಾಖಲಿಸಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಇದೇ ನ್ಯಾಯಾಲಯದವರು ಇಪಿ ನಂ. 24/2010 ರಲ್ಲಿ ಚಾಂದಬಿ ಹುಲೀಕೇರಿ ಅವರನ್ನು ಹೊರಹಾಕಿ 2 ನೇ ಪ್ರತಿವಾದಿಗೆ ಸ್ವಾಧೀನವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು

ನುಡಿಯುತ್ತಾರೆ. 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಅತ್ತೆಗೆ ಟಿಎಮಸಿ ನಂ. 2010/10(9) ಪೂರ್ವ ಪಶ್ಚಿಮ 30 ಅಡಿ ಉತ್ತರ ದಕ್ಷಿಣ 20 ಅಡಿ ಯನ್ನು ಮಂಜೂರು ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸರ್ವೆ ನಂಬರಗೂ ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಮಂಜೂರಾಗಿರುವುದಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 178 ರಲ್ಲಿ 1993 ರಲ್ಲಿ 2 ನೇ ಪ್ರತಿವಾದಿಯ ಅತ್ತೆಯವರು ಕಟ್ಟಿರುವ ಕಟ್ಟಡವನ್ನು ಬಿಟ್ಟರೇ ಬೇರೆ ಯಾವುದೇ ಕಟ್ಟಡವನ್ನು ಕಟ್ಟಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೂ 2 ನೇ ಪ್ರತಿವಾದಿ ಕಟ್ಟಿರುವ ಮನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ದಾವಾ ಜಮೀನನ್ನು ಅತಿಕ್ರಮಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**